<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.697/2021. PW-4.**

ದಿನಾಂಕ:**28.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಕೆ ಎಂ ಜೆ ವಕೀಲರಿಂದ:-

ನನ್ನ ಹೆಸರು ಸಿ ಜಿ ಪರಮೇಶ್ವರಪ್ಪ ಬಿನ್ ಗಂಗಾಧರಪ್ಪ. ನನ್ನ ಊರು ಚಿಕ್ಕಬಳ್ಳೆಕೆರೆ. ಪ್ರತಿವಾದಿಗಳು ಹನುಮನಹಳ್ಳಿಯವರು. ದಾವಾ ಸ್ವತ್ತು ದೊಡ್ಡಬಳ್ಳೆಕೆರೆ ಗ್ರಾಮದಲ್ಲಿ ಇದೆ. ದಾವಾ ಸ್ವತ್ತಿನ ಸರ್ವೆ ನಂ.17/1 ಆಗಿರುತ್ತದೆ. ಅದರ ಹಳೆಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗೆ ಬಸಪ್ಪ ಮತ್ತು ಅವರ ಅಜ್ಜ ಶಿವರುದ್ರಪ್ಪ ರವರಿಂದ ಬಂದಿರುತ್ತದೆ. ಆ ಕ್ರಯಪತ್ರಕ್ಕೆ ನಾನು ಸಾಕ್ಷಿಯಾಗಿರುವುದಿಲ್ಲ.

ಸರ್ವೆ ನಂ.17/1 ರ ಪೂರ್ವಕ್ಕೆ ನನ್ನ ಜಮೀನು ಇದೆ. ನನ್ನ ಜಮೀನಿನ ಸರ್ವೆ ನಂ.17/1 ಆಗಿರುತ್ತದೆ. ನನಗೆ ನನ್ನ ಜಮೀನು ಪಾರಮ್ಮ ಮತ್ತು ಶಿವರುದ್ರಪ್ಪ ರವರ ಕಡೆಯಿಂದ ಬಂದಿರುತ್ತದೆ. ನನ್ನ ಜಮೀನನ್ನು ಮೂಲತಃ ನನ್ನ ಅಜ್ಜ ಖರೀದಿಸಿರುತ್ತಾರೆ. ನನ್ನ ಅಜ್ಜನ ಕಾಲದಿಂದ ನಾವೇ ಸ್ವಾಧೀನದಲ್ಲಿ ಇದ್ದೇವೆ, ಅದು ಒಟ್ಟು 4 ಎಕರೆ ಚಿಲ್ಲರೆ ಗುಂಟೆ ಇದೆ. ನನ್ನ ತಂದೆ ಗಂಗಾಧರಪ್ಪ, ನಾವು ಒಟ್ಟು 4 ಜನ ಮಕ್ಕಳು. ಸರ್ವೆ ನಂ.17/1 ರಲ್ಲಿ ನಾವು 4 ಜನ ಮಕ್ಕಳಿಗೂ ಹಿಸ್ಸೆ ಇದೆ ಎಂದರೆ ಸಾಕ್ಷಿಯು ನಾವು ಈ ವರೆಗೂ ವಿಭಾಗವಾಗಿರುವುದಿಲ್ಲ ಅದು ಇನ್ನು ನನ್ನ ತಂದೆಯ ಹೆಸರಿನಲ್ಲಿ ಇದೆ. ನಾವು ಇವತ್ತಿಗೂ ಸಹ: ಒಟ್ಟು ಕುಟುಂಬದಲ್ಲಿ ಇದ್ದೇವೆ. ನನ್ನ ಜಮೀನಿನ ಚೆಕ್ಕುಬಂಧಿ ಹೇಳಲಾಗುವುದಿಲ್ಲ.

ದಾವಾ ಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನನಗೆ ಚೆಕ್ಕುಬಂಧಿ ಎಂದರೆ ಏನು ಎಂದು ಗೊತ್ತಿಲ್ಲ. ಈಗಲೂ ಸಹ: ದಾವಾ ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿಗಳು ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ನೋಡಿದಾಗಿನಿಂದಲೂ ವಾದಿಯು ಸ್ವಾಧೀನದಲ್ಲಿ ಇದ್ದಾರೆ. ದಾವಾ ಸ್ವತ್ತಿನ ಖಾತೆಯು ಈ ವರೆಗೂ ವಾದಿಯ ಅಥವಾ ವಾದಿಯ ಕುಟುಂಬದ ಸದಸ್ಯರ ಹೆಸರಿಗೆ ಆಗಿಲ್ಲ ಎಂದರೆ ಸರಿ. ವಾದಿಯು ಜೀವಂತವಿದ್ದಾರೆ. ನನಗೆ ಈಗ 65 ವರ್ಷ. ವಾದಿಗೆ ಸು.70 ರ ಮೇಲೆ ವಯಸ್ಸಾಗಿದೆ, ಅವರು ನನಗಿಂತ ಹಿರಿಯವರು.

ವಾದಿಯ ತಂದೆಯ ಹೆಸರು ಗಂಗಪ್ಪ ಎಂದರೆ ಸರಿಯಲ್ಲ, ಶಿವರುದ್ರಪ್ಪ ಎಂದಾಗಿರುತ್ತದೆ. ನನಗೆ ವೈಯಕ್ತಿಕವಾಗಿ ವಾದಿಯ ಕುಟುಂಬದ ಬಗ್ಗೆ ಮಾಹಿತಿ ಇಲ್ಲ, ಬಸಪ್ಪ ರವರ ಮಗಳು ವಾದಿ ಎಂದು ಗೊತ್ತಾಗಿರುತ್ತದೆ.

ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಹಾಗೂ ವಾದಿಯು ಹೇಳಿದ್ದಂತೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಗೂ ಈ ದಾವಾ ಸ್ವತ್ತಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.